# ಪ್ರೀತಿ-ವಿಶ್ವಾಸದೊಂದಿಗೆ ಕಬೀರ!



**ಐವತ್ತರ ದಶಕದಲ್ಲಿ ರಾಜಕುಮಾರ್ ನಟಿಸಿದ್ದ ಕಬೀರನ ಪಾತ್ರವನ್ನು ಶಿವರಾಜ್‌ಕುಮಾರ್ ಇಷ್ಟಪಟ್ಟು ನಿರ್ವಹಿಸಿದ್ದಾರೆ. ಇಂದ್ರಬಾಬು ನಿರ್ದೇಶನದ ಈ ಸಿನಿಮಾ ಸಿದ್ಧಸೂತ್ರದ ಕಥನಗಳ ನಡುವೆ ಹಿತವಾದ ಅಚ್ಚರಿಯಂತೆ ಭಾಸವಾಗುತ್ತಿದೆ.**

‘ಈ ಸಿನಿಮಾದಲ್ಲಿ ಯಾವ ಆಯುಧ ಹಿಡಿಯುವಿರಿ?’ ಇದು ‘ಸಂತೆಯಲ್ಲಿ ನಿಂತ ಕಬೀರ’ ಸಿನಿಮಾದ ಮುಹೂರ್ತ ನಡೆದ ನಂತರ ಶಿವರಾಜ್‌ಕುಮಾರ್ ಅವರನ್ನು ಯಾರೋ ಒಬ್ಬರು ಕೇಳಿದ ಪ್ರಶ್ನೆ. ಈ ಪ್ರಶ್ನೆಗೆ ಶಿವಣ್ಣ ಬೇಸರಿಸಿಕೊಳ್ಳದೆ ನೀಡಿದ ಉತ್ತರ– ‘ಈ ಸಿನಿಮಾದಲ್ಲಿ ನಾನು ನಿರ್ವಹಿಸಲಿರುವ ಪಾತ್ರ ಬಳಸುವ ಆಯುಧಗಳು – ಪ್ರೀತಿ ಮತ್ತು ವಿಶ್ವಾಸ. ಇದರ ಜೊತೆಗೆ ನೈತಿಕ ಮೌಲ್ಯ ಎನ್ನುವ ಬಹುದೊಡ್ಡ ಆಯುಧವೂ ಇದೆ’.

ಕಬೀರ ಸಿನಿಮಾ ಶಿವರಾಜ್‌ಕುಮಾರ್ ಅವರನ್ನು ಆವರಿಸಿಕೊಂಡಿರುವುದಕ್ಕೆ ಮೇಲಿನ ಅವರ ಮಾತು ಉದಾಹರಣೆಯಂತಿದೆ. ಅಷ್ಟು ಮಾತ್ರವಲ್ಲ, ಕನ್ನಡ ಚಿತ್ರರಂಗ ಕೆಲವು ವರ್ಷಗಳಿಂದ ಹಿಡಿದಿರುವ ರಕ್ತಸಿಕ್ತ ಕಥನಗಳ ದಿಕ್ಕು ಹಾಗೂ ಇಂಥ ಕಥನಗಳ ನಡುವೆ ಕಬೀರನ ಅನನ್ಯತೆಯನ್ನೂ ಮೇಲಿನ ಪ್ರಶ್ನೋತ್ತರ ಸೂಚಿಸುವಂತಿದೆ. ಶಿವಣ್ಣ ಮತ್ತೆ ಮತ್ತೆ ಹೇಳುವಂತೆ – ‘ಕಬೀರ ಅವರ ವೃತ್ತಿಜೀವನದ ಮಹತ್ವಾಕಾಂಕ್ಷೆಯ ಚಿತ್ರಗಳಲ್ಲೊಂದು ಹಾಗೂ ನೆನಪಿನಲ್ಲುಳಿಯುವ ಸಿನಿಮಾ’.

ನಿರ್ದೇಶಕ ಇಂದ್ರಬಾಬು ಅವರ ಪಾಲಿಗೂ ‘ಸಂತೆಯಲ್ಲಿ ನಿಂತ ಕಬೀರ’ ಮಹತ್ವಾಕಾಂಕ್ಷೆಯ ಸಿನಿಮಾ. ಚೊಚ್ಚಿಲ ನಿರ್ದೇಶನದ ‘ಕಬಡ್ಡಿ’ ಚಿತ್ರಕ್ಕೆ ರಾಜ್ಯಪ್ರಶಸ್ತಿ ಪಡೆದ ಈ ನಿರ್ದೇಶಕ ನಂತರ ಮತ್ತೊಂದು ಸಿನಿಮಾ ರೂಪಿಸಲು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಓಟಗಾರನೊಬ್ಬನ ಕಥೆಯ ಸಿನಿಮಾ ಮಾಡಲು ಪ್ರಯತ್ನಿಸಿದರೂ ಅದಕ್ಕೆ ಮುಹೂರ್ತವೇ ಕೂಡಿಬರಲಿಲ್ಲ. ಕೊನೆಗೆ. ಭೀಷ್ಮ ಸಹಾನಿ ಅವರ ‘ಕಬೀರ್ ಖಡಾ ಬಾಜಾರ್ ಮೆ’ ನಾಟಕ ಅವರ ಗಮನಸೆಳೆದಿದೆ. ಹದಿನೈದನೇ ಶತಮಾನದ ಸಂತಕವಿಯ ಬದುಕು ಈಗ ಹಿಂದೆಂದಿಗಿಂತಲೂ ಹೆಚ್ಚು ಪ್ರಸ್ತುತ ಎಂದು ಅವರಿಗನ್ನಿಸಿದೆ. ಕಥೆ ಹೇಳಿದಾಗ ಶಿವರಾಜ್ ಕೂಡ ಪುಲಕಿತರಾಗಿದ್ದಾರೆ. ತಮ್ಮ ತಂದೆ ರಾಜಕುಮಾರ್ ಅವರು ಐವತ್ತರ ದಶಕದಲ್ಲಿ ನಿರ್ವಹಿಸಿದ್ದ ಪಾತ್ರ ತಮ್ಮ ಪಾಲಿಗೆ ಒದಗಿಬಂದ ಸಂಭ್ರಮ ಅವರದು. ಹೀಗೆ, 2015ರ ಯುಗಾದಿ ದಿನ ಕಬೀರನ ಚಿತ್ರಕ್ಕೆ ಮುಹೂರ್ತ ಒದಗಿಬಂತು.

ಕಬೀರನನ್ನು ಎಲ್ಲ ನಿಟ್ಟಿನಿಂದಲೂ ಅರ್ಥಪೂರ್ಣಗೊಳಿಸುವ ನಿಟ್ಟಿನಲ್ಲಿ ಇಂದ್ರಬಾಬು ಸಾಕಷ್ಟು ಎಚ್ಚರಿಕೆ ವಹಿಸಿದ್ದಾರೆ. ಭೀಷ್ಮ ಸಹಾನಿ ಅವರ ಕೃತಿಯನ್ನು ಕನ್ನಡಕ್ಕೆ ತಂದಿದ್ದ ಗೋಪಾಲ ವಾಜಪೇಯಿ ಅವರಿಂದ ಕಬೀರನ ದೋಹಾಗಳನ್ನು ರೂಪಾಂತರಿಸಿದ್ದಾರೆ. ವಾಜಪೇಯಿ ಅವರೇ ಸಂಭಾಷಣೆಯನ್ನೂ ಬರೆದಿದ್ದಾರೆ. ಸೂಫಿ ಹಿನ್ನೆಲೆಯ ಸಂಗೀತಗಾರ ಇಸ್ಮಾಯಿಲ್ ದರ್ಬಾರ್ ಅವರನ್ನು ಸಂಗೀತ ಸಂಯೋಜನೆಗೆ ಕರೆತಂದಿದ್ದಾರೆ. ದರ್ಬಾರ್ ಸಂಗೀತ ಸಂಯೋಜನೆಯ ಗೀತೆಗಳ ಬಗ್ಗೆ ಸಹೃದಯರಿಂದ ಮೆಚ್ಚುಗೆ ವ್ಯಕ್ತವಾಗಿರುವುದು ಕಬೀರ ಚಿತ್ರದ ನಿರೀಕ್ಷೆಗಳನ್ನು ಹೆಚ್ಚಿಸಿದೆ.

ಕಾವೇರಿ ದಡದಲ್ಲಿ ವಾರಾಣಸಿಯ ಪರಿಸರವನ್ನು ಸೃಷ್ಟಿಸಿ ಇಂದ್ರಬಾಬು ಚಿತ್ರೀಕರಣ ನಡೆಸಿದ್ದಾರೆ. ಇಡೀ ಸಿನಿಮಾ ಒಂದು ‘ಸುಂದರಸಾಹಸ’ದಂತೆ ಮುಗಿದಿದ್ದು, ಈಗ ಪ್ರೇಕ್ಷಕರ ಮುಂದೆ ಕಬೀರನನ್ನು ನಿಲ್ಲಿಸಲು ಬಾಬು ಬಳಗ ಸಿದ್ಧತೆ ನಡೆಸಿದೆ.

ಕಬೀರ ಚಿತ್ರದ ತಾರಾಗಣವೂ ಸೊಗಸಾಗಿದೆ. ಶಿವಣ್ಣ ಮುಖ್ಯಪಾತ್ರದಲ್ಲಿ ನಟಿಸಿದ್ದರೆ, ಮತ್ತೊಂದು ಮುಖ್ಯ ಪಾತ್ರದಲ್ಲಿ ಅನಂತನಾಗ್ ನಟಿಸಿದ್ದಾರೆ. ಇಬ್ಬರೂ ಜಿದ್ದಿಗೆ ಬಿದ್ದಂತೆ ಚಿತ್ರವನ್ನು ಆವರಿಸಿಕೊಂಡಿದ್ದಾರಂತೆ. ಮಲೆಯಾಳಿ ಹುಡುಗಿ ಸನುಷಾ ಚಿತ್ರದ ನಾಯಕಿ. ಕನ್ನಡದಲ್ಲಿ ನಟಿಸಿದ ಮೊದಲ ಚಿತ್ರದಲ್ಲೇ ತಾರಾವರ್ಚಸ್ಸಿನ ನಾಯಕನ ಜೊತೆ ತೆರೆ ಹಂಚಿಕೊಳ್ಳುವ ಖುಷಿ ಅವರದು. ಓಂಪುರಿ, ದತ್ತಣ್ಣ, ಶರತ್ ಲೋಹಿತಾಶ್ವ ಹಾಗೂ ಅವಿನಾಶ್ ತಾರಾಗಣದಲ್ಲಿರುವ ಪ್ರಮುಖರು.

■ **ರಘು**